ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ – ೦೬

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೇಳನೇ ಅಧಿವೇಶನ**

**ಮಂಗಳವಾರ, ದಿನಾಂಕ: ೧೦ನೇ ಫೆಬ್ರವರಿ, ೨೦೧೫**

---

**ಸಮೂಹ – II**

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

**ಸಕ್ಕರೆ ಕಾರ್ಖಾನೆಗಳಿಂದ ಹಣ ಸಂದಾಯ ಮಾಡದೇ ಇರುವ ಬಗ್ಗೆ**

**ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೭೬ (೭೯೨) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರು ಸಕ್ಕರೆ ಕಾರ್ಖಾನೆಗಳಿಗೆ ಕಬ್ಬನ್ನು ಕಳುಹಿಸಿದ ಎಷ್ಟು ದಿನಗಳೊಳಗಾಗಿ ರೈತರಿಗೆ ಕಾರ್ಖಾನೆಯವರು ಹಣ ಸಂದಾಯ ಮಾಡಬೇಕು ; ಒಂದು ವೇಳೆ ಹಣ ಸಂದಾಯ ಮಾಡದೇ ಇದ್ದಲ್ಲಿ, ಯಾವ ಯಾವ ಕ್ರಮ ಕೈಗೊಳ್ಳುವರು ; ಹಾಗೂ ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು ;

(ಆ) ಈ ವರ್ಷ ಕಾರ್ಖಾನೆಗಳಿಗೆ ರೈತರು ಕಳುಹಿಸಿದ ಕಬ್ಬಿಗೆ ಈವರೆವಿಗೂ ಹಣ ಸಂದಾಯ ಮಾಡದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಯಾವ-ಯಾವ ಕಾರ್ಖಾನೆಗಳು ಈ ವರ್ಷ ರೈತರು ಹಚ್ಚಿದ ಕಬ್ಬಿಗೆ ಎಷ್ಟು-ಎಷ್ಟು ಹಣ ಕೊಡಬೇಕು ಎಂದು ಘೋಷಿಸಿರುವರು ; (ವಿವರ ನೀಡುವುದು)

(ಈ) ಈ ವರ್ಷ ಯಾವ-ಯಾವ ಕಾರ್ಖಾನೆಗಳು ಎಂದಿನಿಂದ ಕಬ್ಬು ನುರಿಸಲು ಪ್ರಾರಂಭಿಸಿರುವುವು ; ಹಾಗೂ ಇಲ್ಲಿಯವರೆಗೆ ಎಷ್ಟು ಕಬ್ಬು ನುರಿಸಿರುತ್ತಾರೆ ; (ಪ್ರತಿಯೊಂದು ಕಾರ್ಖಾನೆ ಮಾಹಿತಿ ನೀಡುವುದು)

(ಉ) ಈ ವರ್ಷ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರು ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ಮಾಡಿರುವರು ;

(ಊ) ಪ್ರತಿಯೊಂದು ಕಾರ್ಖಾನೆಯವರು ತೂಕದಲ್ಲಿ ಮೋಸ ಮಾಡುತ್ತಿದ್ದು, ಹೆಚ್ಚಿಗೆ ಮನ ಬಂದಂತೆ ಸೂಟ್ ತೆಗೆಯುತ್ತಿದ್ದು, ಗ್ಯಾಂಗದವರಿಗೆ ಮನ ಬಂದಂತೆ ಹಣ ರೈತರಿಂದ ಸುಲಿಗೆ ಮಾಡಲು ಅವಕಾಶ ಮಾಡಿಕೊಡುತ್ತಿದ್ದು, ಇದನ್ನು ನಿಯಂತ್ರಿಸಲು ಯಾವ ಕ್ರಮ ಕೈಗೊಳ್ಳಲಾಗುತ್ತಿದೆ ;

(ಋ) ಇದನ್ನು ಪರೀಕ್ಷಿಸಲು ಬೆಂಗಳೂರಿನಿಂದ ಉನ್ನತ ಮಟ್ಟದ ಅಧಿಕಾರಿಗಳನ್ನು ಫ್ಯಾಕ್ಟರಿಗಳಿಗೆ ಕಳುಹಿಸಿ ತಪಾಸಣೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ;

(ಎ) ಈವರೆವಿಗೂ ತಪ್ಪು ಎಸಗಿದ ಕಾರ್ಖಾನೆಗಳ ಮೇಲೆ ಕೈಗೊಂಡಿರುವ ಕ್ರಮಗಳಾವುವು ? (ವಿವರ ನೀಡುವುದು)

## ವಿಧಾನ ಸೌಧದ ಆವರಣದಲ್ಲಿ ಪ್ರತಿಷ್ಠಾಪಿಸಿರುವ ಗಾಂಧಿ ಪ್ರತಿಮೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೭೭ (೬೮೪) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ವಿಧಾನ ಸೌಧದ ಆವರಣದಲ್ಲಿ ಪ್ರತಿಷ್ಠಾಪನೆ ಮಾಡಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪ್ರತಿಮೆಯನ್ನು ಸ್ಥಾಪಿಸಲು ಲೋಕೋಪಯೋಗಿ ಇಲಾಖೆ ಮಾಡಿದ್ದ ಅಂದಾಜು ವೆಚ್ಚ ಎಷ್ಟು ; ಈಗ ಖರ್ಚಾಗಿರುವ ಹಣವೆಷ್ಟು ; ಸದರಿ ಪ್ರತಿಮೆಯ ಎತ್ತರ ಹಾಗೂ ಅದರ ನೆಲಕಟ್ಟು ಮತ್ತು ಪೀಠ ಎಷ್ಟು ಎತ್ತರವಿದೆಯೆಂಬುದರ ವಿವರ ನೀಡುವುದು ;

(ಆ) ಸದರಿ ಪ್ರತಿಮೆ ಮಾಡಿಸಿದ್ದು ಎಲ್ಲಿ ; ಮಾಡಿದವರು ಯಾರು ಹಾಗೂ ಅವರಿಗೆ ನೀಡಿರುವ ಹಣವೆಷ್ಟು ; ಸದರಿ ಪ್ರತಿಮೆಯ ರೀತ್ಯಾ ಇದೇ ಅಳತೆಯಲ್ಲಿ ಎಲ್ಲಿಯಾದರೂ ದೇಶದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆಯೇ ; ಮಾಡಲಾಗಿದ್ದಲ್ಲಿ, ಎಲ್ಲಿ, ಯಾವಾಗ ? (ವಿವರ ನೀಡುವುದು)

## NH-75 ಶಿರಾಡಿ ರಸ್ತೆಯ ಗುಣಮಟ್ಟ ಕಾಪಾಡುವ ಬಗ್ಗೆ

**ಶ್ರೀ ಎಂ. ಶ್ರೀನಿವಾಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೭೮ (೮೦೮) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ರಾಜಧಾನಿಯಿಂದ ಕರಾವಳಿ ಪ್ರದೇಶಕ್ಕೆ ಸಂಪರ್ಕ ಕೊಂಡಿಯಾಗಿರುವ ರಾಷ್ಟ್ರೀಯ ಹೆದ್ದಾರಿ–೭೫ (NH-75) ಶಿರಾಡಿ ರಸ್ತೆಯ ಉದ್ದ ಎಷ್ಟು ; ಪದೇ ಪದೇ ಈ ರಸ್ತೆಯ ದುರಸ್ತಿಗೆ ಕಾರಣವಾದ ಅಂಶಗಳು ಏನು ; (ಮಾಹಿತಿ ಒದಗಿಸುವುದು)

(ಆ) ಕಳೆದ ೫ ವರ್ಷಗಳ ಅವಧಿಯಲ್ಲಿ ಈ ಶಿರಾಡಿ ರಸ್ತೆಯ ದುರಸ್ತಿ ಮತ್ತು ನಿರ್ವಹಣೆಗಾಗಿ ವ್ಯಯಿಸಿದ ಹಣ ಎಷ್ಟು ; (ವರ್ಷವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ಅಧಿಕ ಹಣ ವ್ಯಯವಾಗುತ್ತಿದ್ದರೂ, ರಸ್ತೆಯ ಗುಣಮಟ್ಟ ಕಳಪೆಯಾಗಲು ಯಾವ ಕಾರಣಗಳನ್ನು ಗುರುತಿಸಲಾಗಿದೆ ;

(ಈ) ದೀರ್ಘಕಾಲಾವಧಿಯಲ್ಲಿ ಈ ರಸ್ತೆಯಲ್ಲಿನ ಸುಗಮ ಸಂಚಾರ, ಗುಣಮಟ್ಟ ರಸ್ತೆ ನಿರ್ಮಾಣಕ್ಕೆ ಕೈಗೊಂಡ ಕ್ರಮಗಳು ಏನು ? (ಸಂಪೂರ್ಣ ಮಾಹಿತಿ ಒದಗಿಸುವುದು)

**ರಾಜ್ಯದ ಅನೇಕ ರಸ್ತೆಗಳಲ್ಲಿ ಹೆಚ್ಚಾಗಿ ಟೋಲ್ ಸಂಗ್ರಹಣೆ ಮಾಡುತ್ತಿರುವ ಬಗ್ಗೆ**

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೯ (೮೨೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ರಸ್ತೆಗಳಲ್ಲಿ ಹೆಚ್ಚು ಟೋಲ್ ಸಂಗ್ರಹಿಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಆ) ಬಹುಮುಖ್ಯವಾಗಿ ನೆಲಮಂಗಲ–ತುಮಕೂರು ರಸ್ತೆಗೆ ಸರಿಯಾದ ಯಾವುದೇ ಕಾಮಗಾರಿಗಳನ್ನು ನಿರ್ವಹಿಸದಿರುವುದರಿಂದ ಸುಗಮವಾಗಿ ರಸ್ತೆಯಲ್ಲಿ ಸಂಚರಿಸಲು ಯೋಗ್ಯವಾಗಿರುವುದಿಲ್ಲ ಇಂತಹ ಸ್ಥಳಗಳಲ್ಲೂ ಸಹ ಟೋಲ್ ಸಂಗ್ರಹಿಸುತ್ತಿರುವುದು ಸಮಂಜಸವೇ ;

(ಇ) ರಸ್ತೆಗಳಿಗೆ ಟೋಲ್‌ಗಳನ್ನು ಹೆಚ್ಚಾಗಿ ಪಡೆಯುತ್ತಿರುವ ರಸ್ತೆ ನಿರ್ವಹಣಾ ಏಜೆನ್ಸಿಗಳ ವಿರುದ್ಧ ಸರ್ಕಾರದ ಕ್ರಮಗಳೇನು ?

**ತುಮಕೂರು ನಗರದಲ್ಲಿನ ಕೃಷಿ ಮಾರುಕಟ್ಟೆ ಪ್ರಾಂಗಣದ ಬಗ್ಗೆ**

**ಡಾ. ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೦ (೬೩೨) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ನಗರದಲ್ಲಿ ಹೊಸದಾಗಿ ಅಂತರಸನಹಳ್ಳಿ ಬಳಿ ನಿರ್ಮಿಸಿರುವ ಕೃಷಿ ಮಾರುಕಟ್ಟೆ ಉಪ ಪ್ರಾಂಗಣಕ್ಕೆ ಸಿದ್ದಿ ವಿನಾಯಕ ಮಾರುಕಟ್ಟೆಯ ವ್ಯಾಪಾರ ವಹಿವಾಟನ್ನು ಅವೈಜ್ಞಾನಿಕವಾಗಿ ಸ್ಥಳಾಂತರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಮಾರುಕಟ್ಟೆ ನಗರದ ಕೇಂದ್ರ ಸ್ಥಾನದಲ್ಲಿದ್ದು, ವ್ಯಾಪಾರಿಗಳಿಗೂ ಹಾಗೂ ಸಾರ್ವಜನಿಕರಿಗೂ ಅನುಕೂಲವಾಗಿದ್ದು, ಕೆಲವು ಹಿತಾಶಕ್ತಿಗಳು ಉದ್ದೇಶಪೂರ್ವಕವಾಗಿ ಈ ಮಾರುಕಟ್ಟೆಯನ್ನು ಅಂತರಸನಹಳ್ಳಿ ಉಪ ಪ್ರಾಂಗಣಕ್ಕೆ ವರ್ಗಾವಣೆ ಮಾಡಿಸಿರುವುದು ನಿಜವೇ ;

(ಇ) ದಿಢೀರನೆ ಸ್ಥಳಾಂತರ ಮಾಡಿರುವ ಮಾರುಕಟ್ಟೆಯಲ್ಲಿ ಯಾವುದೇ ಮೂಲಭೂತ ಸೌಲಭ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಅಂತರಸನಹಳ್ಳಿ ಉಪ ಪ್ರಾಂಗಣದಲ್ಲಿ ಮಳಿಗೆ ಹಂಚಿಕೆ ಹಾಗೂ ಮೂಲೆ ನಿವೇಶನದ ಹಂಚಿಕೆ ಮೊದಲಾದವುಗಳ ಬಗ್ಗೆ ಭಾರಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಈ ಅಂತರಸನಹಳ್ಳಿ ಉಪ ಪ್ರಾಂಗಣವು ಕೊಯಮತ್ತೂರು–ಕೊಳ್ಳೇಗಾಲ ರಾಷ್ಟ್ರೀಯ ಹೆದ್ದಾರಿಯ ವ್ಯಾಪ್ತಿಯಲ್ಲಿ ಬರುವ ಹಿನ್ನೆಲೆಯಲ್ಲಿ ಮುಂದೆ ಇದರ ಅಸ್ತಿತ್ವಕ್ಕೆ ಧಕ್ಕೆ ಆಗುವ ಸಂಭವವಿರುವ ಬಗ್ಗೆ ಸರ್ಕಾರ ಯೋಚಿಸಿದೆಯೇ ; ಧಕ್ಕೆಯಾದಲ್ಲಿ, ವ್ಯಾಪಾರಿಗಳು ಹಾಗೂ ರೈತರ ಹಿತರಕ್ಷಣೆಗೆ ಯಾವ ರೀತಿಯ ಕ್ರಮಕೈಗೊಳ್ಳಲಾಗುವುದು ?

## ರೈತರಿಗೆ ಉಚಿತ ಡಿಸೇಲ್ ಪಂಪ್‌ಸೆಟ್ ವಿತರಿಸುವುದು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೧ (೬೪೭) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

(ಅ) ರಾಜ್ಯದಲ್ಲಿ ಕೃಷಿ ಭಾಗ್ಯ ಯೋಜನೆಯಡಿ ರೈತರಿಗೆ ಉಚಿತವಾಗಿ ಡೀಸೆಲ್ ಪಂಪ್‌ಸೆಟ್‌ಗಳನ್ನು ಕೊಡುತ್ತಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಈ ಯೋಜನೆಯ ಅಡಿಯಲ್ಲಿ ರಾಜ್ಯದಲ್ಲಿನ ಎಷ್ಟು ಜಿಲ್ಲೆಗಳ ಯಾವ ಯಾವ ತಾಲ್ಲೂಕುಗಳನ್ನು ಆಯ್ಕೆ ಮಾಡಲಾಗಿದೆ ;

(ಇ) ರೈತರು ಅವುಗಳನ್ನು ಪಡೆದುಕೊಳ್ಳಲು ಇರುವ ಮಾನದಂಡಗಳೇನು ; ಮತ್ತು ರೈತ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಇರುವ ಮಾನದಂಡಗಳೇನು ;

(ಈ) ೨೦೧೫–೧೬ನೇ ಸಾಲಿನಲ್ಲಿ ಎಷ್ಟು ಜನ ರೈತರಿಗೆ ಈ ಯೋಜನೆಯನ್ನು ತಲುಪಿಸುವ ವಿಚಾರ ಸರ್ಕಾರದ ಮುಂದೆ ಇದೆ ;

(ಉ) ರಾಜ್ಯದ ಎಲ್ಲಾ ರೈತರಿಗೆ ಡೀಸೆಲ್ ಪಂಪ್‌ಸೆಟ್ ಕೊಡುವ ವಿಚಾರ ಸರ್ಕಾರದ ಮುಂದೆ ಇದೆಯೇ ; ಹಾಗಿದ್ದಲ್ಲಿ, ಎಲ್ಲಾ ರೈತರಿಗೆ ಯಾವ ಕಾಲಮಿತಿಯಲ್ಲಿ ಈ ಯೋಜನೆಯನ್ನು ತಲುಪಿಸಲಾಗುವುದು ?

## ಕೃಷಿ ಮಾರುಕಟ್ಟೆ ವತಿಯಿಂದ ನಿರ್ಮಿಸಲಾದ ವ್ಯಾಪಾರ ಮಳಿಗೆಗಳು

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) –**

೮೨ (೬೮೯) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ಮಾರುಕಟ್ಟೆ ವತಿಯಿಂದ (ಎ.ಪಿ.ಎಂ.ಸಿ.) ನಿರ್ಮಿಸಲಾಗಿರುವ ವ್ಯಾಪಾರ ಮಳಿಗೆಗಳೆಷ್ಟು ; ಎಲ್ಲೆಲ್ಲಿ ವ್ಯಾಪಾರ ಮಳಿಗೆಗಳನ್ನು ನಿರ್ಮಿಸಲಾಗಿದೆ ;

(ಆ) ಈ ಮಳಿಗೆಗಳನ್ನು ನೀಡುವಾಗ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರ್ಗಗಳಿಗೆ ಮೀಸಲಾತಿ ಪಾಲಿಸಲಾಗಿದೆಯೇ ; ಯಾವ ಯಾವ ಮಾರುಕಟ್ಟೆಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರ್ಗಗಳಿಗೆ ಮಳಿಗೆ ನೀಡಲಾಗಿದೆ ? (ಹೆಸರು ಮತ್ತು ವಿಳಾಸದ ವಿವರ ಒದಗಿಸುವುದು)

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸಹಕಾರ ಸಂಘಗಳು ಸಲ್ಲಿಸಿದ ಮೇಲ್ಮನವಿ ಪ್ರಕರಣಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೩ (೭೭೩) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ವಿವಿಧ ಸಹಕಾರಿ ಸಂಘಗಳು ಸರ್ಕಾರದ ವಿರುದ್ಧ ಮೇಲ್ಮನವಿ ಸಲ್ಲಿಸಿ, ತಡೆಯಾಜ್ಞೆ ಪಡೆದ ಪ್ರಕರಣಗಳೆಷ್ಟು ; ವಕಾಲತ್ತು ನಡೆಸುತ್ತಿರುವ ನ್ಯಾಯವಾದಿಗಳು ಯಾರು ; (ವರ್ಷವಾರು ಪ್ರಕರಣವಾರು ವಿವರ ನೀಡುವುದು)

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ವಿವಿಧ ಸಹಕಾರಿ ಸಂಘಗಳು ಸರ್ಕಾರದ ವಿರುದ್ಧ ಮೇಲ್ಮನವಿ ಸಲ್ಲಿಸಿ, ತಡೆಯಾಜ್ಞೆ ಪಡೆದು ಇನ್ನೂ ತಡೆಯಾಜ್ಞೆ ತೆರವಾಗದ ಪ್ರಕರಣಗಳೆಷ್ಟು ; (ವರ್ಷವಾರು ಪ್ರಕರಣವಾರು ವಿವರ ನೀಡುವುದು)

(ಇ) ಇಂತಹ ತಡೆಯಾಜ್ಞೆಗಳಿಂದ ಪ್ರಕರಣಗಳ ಇತ್ಯರ್ಥಕ್ಕೆ ವರ್ಷಾನುಗಟ್ಟಲೆ ವಿಳಂಬವಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ; ಗಮನಿಸಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ಇಂತಹ ಅನಾವಶ್ಯಕ ವಿಳಂಬದಿಂದ ಸರ್ಕಾರದ ಬೊಕ್ಕಸಕ್ಕೆ ಆಗತಕ್ಕಂತಹ ನಷ್ಟವನ್ನು ತಪ್ಪಿಸಲು ಖಾಸಗಿ ಅಥವಾ ಸಾರ್ವಜನಿಕರಿಗೆ ಸರ್ಕಾರದ ಪರವಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದೇ ; ಇಲ್ಲವಾದಲ್ಲಿ, ಕಾರಣವೇನು ?

## ರೈತರ ಪಂಪ್‌ಸೆಟ್‌ಗಳಿಗೆ ಹಗಲಿನ ವೇಳೆಯಲ್ಲಿ ವಿದ್ಯುತ್ ಪೂರೈಕೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೪ (೮೩೧) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯ ರೈತರ ಪಂಪ್ ಸೆಟ್‌ಗಳಿಗೆ ರಾತ್ರಿ ವೇಳೆಯಲ್ಲಿ ವಿದ್ಯುತ್ ಸರಬರಾಜು ಮಾಡುತ್ತಿರುವುದು ನಿಜವೇ ;

(ಆ) ರಾತ್ರಿ ವೇಳೆಯಲ್ಲಿ ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡುವುದರಿಂದ ರೈತರು ರಾತ್ರಿ ವೇಳೆ ನೀರು ಹರಿಸುವ ಕೆಲಸದಲ್ಲಿ ಮಗ್ನರಾಗಿರುವಾಗ ಕರಡಿ ದಾಳಿ ಇತ್ಯಾದಿ ಅವಘಡಗಳು ಸಂಭವಿಸುತ್ತಿರುವುದರಿಂದ, ಇವುಗಳನ್ನು ತಪ್ಪಿಸಲು ಹಗಲಿನ ವೇಳೆಯಲ್ಲಿ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಶಿಂಷಾ ನದಿಗೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸುವ ಬಗ್ಗೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೫ (೮೧೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಶಿಂಷಾ ನದಿಗೆ ಆಲೂರು–ವೈದ್ಯನಾಥಪುರದ ಬಳಿ ಅಡ್ಡಲಾಗಿ ನಿರ್ಮಿಸುತ್ತಿರುವ ಸೇತುವೆಯ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಇದರ ಬಳಿ ಬ್ಯಾರೇಜ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಪ್ರಸಿದ್ಧ ವೈದ್ಯನಾಥಪುರ ದೇವಸ್ಥಾನದ ಬಳಿ ಈ ಸೇತುವೆಯನ್ನೇ ಬ್ರಿಡ್ಜ್ ಕಮ್ ಬ್ಯಾರೇಜ್ ಆಗಿ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಇ) ಹಾಗಿದ್ದಲ್ಲಿ, ಈ ಸೇತುವೆಯನ್ನು ಬ್ರಿಡ್ಜ್ ಕಮ್ ಬ್ಯಾರೇಜ್ ಆಗಿ ನಿರ್ಮಿಸುವುದರಿಂದ ನದಿಯಲ್ಲಿ ನೀರಿನ ಸಂಗ್ರಹಣೆ ಹಾಗೂ ರೈತರ ಕೃಷಿ ಜಮೀನುಗಳಿಗೆ ಅಂತರ್ಜಲ ವೃದ್ಧಿಸಿದಂತಾಗುವುದಿಲ್ಲವೇ ;

(ಈ) ಶಿಂಷಾ ನದಿಯಲ್ಲಿ ನೀರಿನ ಹರಿವು ಕಡಿಮೆ ಆಗಿದ್ದು, ಬ್ಯಾರೇಜ್‌ಗಳಲ್ಲಿ ನೀರಿನ ಸಂಗ್ರಹ ಕಡಿಮೆ ಆಗುತ್ತಿದ್ದು, ಈ ನದಿಯನ್ನು ಪುನರುಜ್ಜೀವನಗೊಳಿಸಲು ಮತ್ತು ನದಿಯ ಜಲಾನಯನ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರಗಳನ್ನು ನೀಡುವುದು)

## ಕೃಷಿ ವ್ಯವಸಾಯ ಕಡಿಮೆಯಾಗುತ್ತಿರುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು)** –

೮೬ (೭೭೨) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರು, ಜಮೀನುದಾರರು, ಶ್ರಮಿಕರು, ವ್ಯವಸಾಯ ಮಾಡುವುದನ್ನು ಬಿಟ್ಟು, ನಗರದ ಕಡೆ ವಲಸೆ ಬರುತ್ತಿರುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ವಿದ್ಯಾವಂತರು ಸಹ ವ್ಯವಸಾಯವನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿ, ನಗರದಲ್ಲಿ ಯಾವುದೋ ಮರೆಮಾಚಿದ ಉದ್ಯೋಗ ಮಾಡುತ್ತಿದ್ದಾರೆ ಎಂಬ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಜನರು ಪ್ರಾಥಮಿಕ ವಲಯವನ್ನು ಲಾಭದಾಯಕವಲ್ಲದ ಉದ್ಯಮವೆಂದು ತೀರ್ಮಾನಿಸಿದ್ದಾರೆ ಎಂಬ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಆದುದರಿಂದ, ಸರ್ಕಾರ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ನಿಗಧಿ ಮಾಡಲು ಸಾಧ್ಯವೇ ;

(ಉ) ಜೊತೆಗೆ ರೈತರ ಮಕ್ಕಳಿಗೆ ಕೃಷಿ ವೃತ್ತಿ ಶಿಕ್ಷಣದಲ್ಲಿ ೫೦% ಮೀಸಲು ಮತ್ತು ಸರ್ಕಾರಿ ಉದ್ಯೋಗದಲ್ಲಿ ೫೦% ಮೀಸಲು ಸೌಲಭ್ಯ ನೀಡಲು ಸರ್ಕಾರ ಮುಂದಾಗುವುದೇ ?

## ಬೀದರ್ ಜಿಲ್ಲೆಯಲ್ಲಿ ವಕ್ಫ್ ಆಸ್ತಿ ಕುರಿತು

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೮೭ (೬೫೬) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ವಕ್ಫ್ ಮಂಡಳಿಗೆ ಸೇರಿದ ಒಟ್ಟು ಆಸ್ತಿ ಎಷ್ಟು ; ಎಷ್ಟು ಎಕರೆ ಭೂಮಿ ಹೊಂದಿದೆ ; ಹೊಂದಿದ್ದಲ್ಲಿ, ಸರ್ವೆ ನಂಬರ್, ಪ್ರದೇಶದ ಸ್ಥಳ ಇತ್ಯಾದಿಯ ತಾಲ್ಲೂಕುವಾರು ವಿವರ ನೀಡುವುದು ;

(ಆ) ಕಳೆದ ೫ ವರ್ಷಗಳಿಂದ ಎಷ್ಟು ವಕ್ಫ್ ಆಸ್ತಿಗಳನ್ನು ಲೀಸ್‌ಗೆ ನೀಡಲಾಗಿದೆ ; ಲೀಸ್‌ಗೆ ನೀಡಿದ್ದಲ್ಲಿ, ಯಾವ ಯಾವ ಉದ್ದೇಶಕ್ಕೆ ಯಾರ್‍ಯಾರಿಗೆ ಎಷ್ಟು ವರ್ಷಕ್ಕೆ ನೀಡಲಾಗಿದೆ ; (ವಿಸ್ತೀರ್ಣವಾರು ಮಾಹಿತಿ ನೀಡುವುದು)

(ಇ) ಜಿಲ್ಲೆಯಲ್ಲಿ ವಕ್ಫ್ ಆಸ್ತಿಗಳನ್ನು ಖಾಸಗಿಯವರು ಆಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಕಳೆದ ೧೦ ವರ್ಷಗಳಲ್ಲಿ ಎಷ್ಟು ಎಕರೆ ವಕ್ಫ್ ಆಸ್ತಿ ಅತಿಕ್ರಮಣ ಮಾಡಿಕೊಂಡಿದ್ದಾರೆ ;

(ಈ) ಅತಿಕ್ರಮಣಕಾರರ ವಿರುದ್ಧ ಸರ್ಕಾರವು ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಗಳಾವುವು ? (ವ್ಯಕ್ತಿಯ ಹೆಸರು ಆಸ್ತಿಯ ಒಟ್ಟು ವಿಸ್ತೀರ್ಣದ ಬಗ್ಗೆ ತಾಲ್ಲೂಕುವಾರು ಮಾಹಿತಿ ಒದಗಿಸುವುದು)

# ಸ್ಥಳೀಯ ಸಂಸ್ಥೆಯ ಸ್ಥಾನಮಾನದ ಬಗ್ಗೆ ಸ್ಪಷ್ಟೀಕರಣ ನೀಡುವ ಕುರಿತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೮೮ (೮೩೫) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರವು ದಿ: ೧೭ ಜನವರಿ ೧೯೮೬ರಲ್ಲಿ ೨೨೭ ಮುನಿಸಿಪಾಲಿಟಿಗಳ ಪೈಕಿ ಎಷ್ಟು ಮುನಿಸಿಪಾಲಿಟಿಗಳನ್ನು ಮಧ್ಯಂತರ ಮಂಡಲ್‌ಗಳನ್ನಾಗಿ ಪರಿವರ್ತಿಸಿದೆ ;

(ಆ) ಪರಿವರ್ತಿಸಿದ್ದರೆ, ಯಾವ ದಿನಾಂಕದಿಂದ ಪರಿವರ್ತನೆ ಮಾಡಲಾಗಿದೆ ; ಇದರಲ್ಲಿ ತಾಲ್ಲೂಕು ಕೇಂದ್ರ ಸ್ಥಾನ ಹೊಂದಿದ ಮಂಡಲ್‌ಗಳ ಸಂಖ್ಯೆ ಎಷ್ಟು ; ಬಾಕಿ ಉಳಿದ ಸಂಖ್ಯೆ ಎಷ್ಟು ; (ವಿವರವಾದ ಮಾಹಿತಿ ಕೊಡುವುದು)

(ಇ) ಪರಿವರ್ತನೆಗೊಂಡ ಮುನಿಸಿಪಾಲಿಟಿಗಳ ಪೈಕಿ ಕರ್ನಾಟಕ ರಾಜ್ಯ ಪಂಚಾಯಿತಿ ಅಧಿನಿಯಮ ದಿ: ೧೦.೫.೧೯೯೩ರಂದು ಜಾರಿಗೆ ಬಂದ ನಂತರ, ತಾಲ್ಲೂಕು ಕೇಂದ್ರ ಸ್ಥಾನ ಹೊಂದಿರದ ಮಂಡಲ್ ಪಂಚಾಯ್ತಿಗಳು ಗ್ರಾಮ ಪಂಚಾಯಿತಿಗಳಾಗಿ ಪರಿವರ್ತನೆಗೊಂಡವು, ಉಳಿದ ತಾಲ್ಲೂಕು ಕೇಂದ್ರ ಸ್ಥಾನ ಹೊಂದಿದ್ದ ಮಧ್ಯಂತರ ಮಂಡಲ್ ಪಂಚಾಯ್ತಿಗಳು ಏನಾಗಿದ್ದವು ; (ವಿವರವಾದ ಮಾಹಿತಿ ಕೊಡುವುದು)

(ಈ) ಇಲಾಖೆಯ ಕಡತ/ಪತ್ರ ಸಂಖ್ಯೆ: DO No. HUD/335/MNE/94, ದಿನಾಂಕ: ೧೨.೭.೧೯೯೪ರ ಪತ್ರದಲ್ಲಿ ತಿಳಿಸಿರುವಂತೆ URBAN OUT-GROWTH (O.G) ಪ್ರದೇಶ ಅಂದರೆ ಏನು ; ಜಿಲ್ಲಾವಾರು ಎಷ್ಟು URBAN OUT-GROWTH (O.G) ಪ್ರದೇಶಗಳಿದ್ದವು ; (ಮಾಹಿತಿ ಕೊಡುವುದು)

(ಉ) ಕರ್ನಾಟಕ ಮುನಿಸಿಪಾಲಿಟಿ ಅಧಿನಿಯಮ ೧೯೬೪ ಮತ್ತು ಪೌರನಿಗಮ ಅಧಿನಿಯಮ ೧೯೭೬ರ ಅನುಸಾರ URBAN OUT-GROWTH (O.G) ಪ್ರದೇಶ ಅಂದರೆ ನಗರ ಪ್ರದೇಶವೇ ; ಪರಿವರ್ತನೆ ಹೊಂದುತ್ತಿರುವ ಪ್ರದೇಶವೇ ; ಗ್ರಾಮೀಣ ಪ್ರದೇಶವೇ ; (ವಿವರವಾದ ಮಾಹಿತಿಯೊಂದಿಗೆ ಸ್ಪಷ್ಟೀಕರಣ ಕೊಡುವುದು)

(ಊ) ಸದರಿ URBAN OUT-GROWTH (O.G) ಪ್ರದೇಶಗಳು ಯಾವ ದಿನಾಂಕದಿಂದ ಪಟ್ಟಣ ಪಂಚಾಯ್ತಿಗಳಾಗಿ ಪರಿವರ್ತನೆಗೊಂಡವು ;

(ಋ) URBAN OUT-GROWTH (O.G) ಪ್ರದೇಶಗಳಾಗಿದ್ದ ಸಮಯದಲ್ಲಿ ಅಲ್ಲಿನ ಶಾಲೆಯಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಗ್ರಾಮೀಣ ವ್ಯಾಸಂಗ ಧೃಢೀಕರಣ ಪತ್ರ ನೀಡಬಹುದೇ ?

## ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಮತ್ತು ಬೇಡಿಕೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)** –

೮೯ (೬೮೦) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗಿಂತ ಬೇಡಿಕೆ ಹೆಚ್ಚಿರುವುದರಿಂದ ವಿದ್ಯುತ್ ಕೊರತೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಕಳೆದ ಮೂರು ವರ್ಷಗಳ ಉತ್ಪಾದನೆ ಮತ್ತು ಬೇಡಿಕೆ ಪ್ರಮಾಣದ ಬಗ್ಗೆ ವಿವರ ಒದಗಿಸುವುದು)

(ಆ) ವಿದ್ಯುತ್ ಬೇಡಿಕೆಯನ್ನು ನೀಗಿಸಲು ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳಾವುವು ; (ವಿವರ ಒದಗಿಸುವುದು)

(ಇ) ಸೋಲಾರ್ ಮೂಲಕ ವಿದ್ಯುತ್ ಉತ್ಪತ್ತಿ ಮಾಡಿಕೊಳ್ಳುವ ಗ್ರಾಹಕರಿಗೆ ರಿಯಾಯಿತಿ ಮತ್ತು ಇತರೆ ಸೌಲಭ್ಯಗಳನ್ನು ನೀಡಲು ಸರ್ಕಾರ ಯೋಚಿಸಿದೆಯೇ ? (ಹಾಗಿದ್ದರೆ, ವಿವರ ಒದಗಿಸುವುದು)

## ನಿಪ್ಪಾಣಿ ನಗರಸಭೆಗೆ ನೀಡಿರುವ ಅನುದಾನ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೦ (೬೮೬) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಿಪ್ಪಾಣಿ ನಗರಸಭೆಗೆ ಕಳೆದ ಎರಡು ವರ್ಷಗಳಿಂದ ಒದಗಿಸಲಾದ ಅನುದಾನವೆಷ್ಟು ; ಇದರಲ್ಲಿ, ಕೇಂದ್ರ ಸರ್ಕಾರದ ಅನುದಾನ ಎಷ್ಟು ; ಇದರಲ್ಲಿ ಬಿಡುಗಡೆಯಾದ ಅನುದಾನ ಎಷ್ಟು ; (ಯೋಜನಾವಾರು ವಿವರ ನೀಡುವುದು)

(ಆ) ಸದರಿ ಕಾಮಗಾರಿಗಳ ಪ್ರಗತಿ ಯಾವ ಹಂತದಲ್ಲಿದೆ ; ಪ್ರಗತಿಯಾಗದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ. 1059 – ಪಿ5